ದಿನಾಂಕ ೭-೭-೮೭ರ ಆದೇಶದಂತೆ ಅವರನ್ನು ಮುಖ್ಯೋಪಾಧ್ಯಾಯರನ್ನಾಗಿ ತೆಗೆದುಕೊಳ್ಳುವಂತೆಯೂ, ಅವರ ವೇತನವನ್ನು ಪಾವತಿ ಮಾಡುವಂತೆಯೂ ಆದೇಶ ನೀಡಿದ್ದಾಗ್ಯೂ, ಅವರನ್ನು ಕೆಲಸದ ಮೇಲೆ ತೆಗೆದುಕೊಳ್ಳಲಿಲ್ಲ. ಹಾಗೂ ವೇತನವನ್ನೂ ಕೊಡಲಿಲ್ಲ. ಸದರಿ ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಶಾಲೆಯ ಆಡಳಿತ ಮಂಡಲಿಯವರು ವಿಮರ್ಶಾ ಅರ್ಜಿಯನ್ನು ಸಲ್ಲಿಸಿದ್ದು. ಅದೂ ಕೂಡ ೨೪-೯-೮೭ ರಂದು ತಳ್ಳಿ ಹಾಕಲ್ಪಟ್ಟಿತು. ಈ ತೀರ್ಪಿನ ಬಗ್ಗೆ ಶಾಲೆಯ ಆಡಳಿತ ಮಂಡಲಿಯವರು ವಿಶೇಷ ಪರಿಶೀಲನಾ ಅರ್ಜಿಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದು. ೧೫-೨-೮೮ರಂದು ಅಲ್ಲಿಂದಲೂ ಸದರಿ ಪರಿಶೀಲನಾ ಅರ್ಜಿಯನ್ನು ತಳ್ಳಿಹಾಕಲಾಯಿತು ಹಾಗೂ ಸದರಿ ವಿಠಲ ಶೆಟ್ಟಿಯವರನ್ನು ಕೆಲಸದ ಮೇಲೆ ತೆಗೆದುಕೊಳ್ಳುವಂತೆಯೂ ಅವರೇ ಶಾಲೆಯ ಇತರ ಉಪಾಧ್ಯಾಯರ ವೇತನ ಬಿಲ್ಲುಗಳನ್ನು ತಯಾರು ಮಾಡುವಂತೆಯೂ ಆದೇಶ ನೀಡಿದ್ದಾಗ್ಯೂ ಇದಕ್ಕನುಗುಣವಾಗಿ ಉಡುಪಿಯ ಸಹಾಯಕ ವಿದ್ಯಾಧಿಕಾರಿಗಳು ಮೇಲ್ಕಂಡ ಶಾಲೆಯ ಸಂಚಾಲಕಿಯವರಿಗೆ ಪತ್ರ ಬರೆದಿದ್ದು. ಶ್ರೀ ವಿಠಲಶೆಟ್ಟಿಯವರನ್ನು ಕೂಡಲೇ ಕೆಲಸದ ಮೇಲೆ ತೆಗೆದುಕೊಂಡು ಆ ಬಗ್ಗೆ ವರದಿಯನ್ನು ಕಳುಹಿಸಬೇಕೆಂದು ತಿಳಿಸಿದ್ದಾಗ್ಯೂ, ಈವರೆಗೂ ಅವರನ್ನು ಕೆಲಸದ ಮೇಲೆ ತೆಗೆದುಕೊಳ್ಳದಿರುವುದರಿಂದ ಸರ್ಕಾರದವರು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಶ್ರೀ ವಿಠಲಶೆಟ್ಟಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವಂತೆ ಹಾಗೂ ಅವರಿಗೆ ಇದುವರೆಗೆ ಬರಬೇಕಾದ ವೇತನವನ್ನು ಕೊಡಿಸುವಂತೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಖಾತೆಯ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ವಿಚಾರಣೆ ಮಾಡಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇನೆ.

6. ಪುತ್ತೂರಿನಲ್ಲಿ ಅಗ್ನಿಶಾಮಕ ದಳವನ್ನು ಸ್ಥಾಪಿಸುವುದು.

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಪುತ್ತೂರು ವಿಭಾಗದ ಸುಳ್ಯ ಬೆಳ್ತಂಗಡಿ, ಕಡಬ, ವಿಟ್ಲ ಈ ಪ್ರದೇಶಗಳು ಕೃಷಿ ಹಾಗೂ ಕೈಗಾರಿಕಾ ರಂಗದಲ್ಲಿ ಮುಂದೆ ಬರುವ ಪ್ರದೇಶಗಳಾಗಿವೆ. ಪುತ್ತೂರು ವಿಭಾಗದಲ್ಲಿ ಅನಿರೀಕ್ಷಿತವಾಗಿ ಬೆಂಕಿ ಅಪಘಾತವಾದರೆ ಅಗ್ನಿಶಾಮಕ ದಳದಿಂದ ನೆರವನ್ನು ಪಡೆಯಬೇಕೆಂದರೆ ಮಂಗಳೂರಿಗೆ ಸಂಪರ್ಕಿಸುವುದರ ಅವಕಾಶವಿರುತ್ತದೆ. ಮಂಗಳೂರಿನಿಂದ ಸುಳ್ಯ ಅಥವಾ ಕಡಬಕ್ಕೆ ತಲುಪಬೇಕಿದ್ದರೆ ಎರಡು ತಾಸುಗಳ ಪೂರ್ಣ ಪ್ರಯಾಣವಾಗುತ್ತದೆ. ಮೇಲ್ಕಂಡ ಪ್ರದೇಶದಲ್ಲಿ ಪುತ್ತೂರಿನಲ್ಲಿ ಜಗತ್ತಿನಲ್ಲಿಯೇ ಪ್ರಸಿದ್ಧವಾದ ಕೆಂಪ್ಕೋ ಚಾಕಲೇಟು ಫ್ಯಾಕ್ಟರಿ ಹಾಗೂ ರಬ್ಬರ್ ಕೃಷಿ ಹಾಗೂ ಇನ್ನಿತರ ಪ್ರಾಮುಖ್ಯ ಬೆಂಕಿ ಅಪಘಾತಕ್ಕೆ ಜಾಗರೂಕತೆಯಿಂದ ಇರಬೇಕಾದ ಕಾರ್ಖಾನೆಗಳಿವೆ. ಆದುದರಿಂದ ಸಾರ್ವಜನಿಕರ ಬೇಡಿಕೆಯನ್ನು ಈ ಹಿಂದೆಯೇ ಸದನದಲ್ಲಿ ಹಾಗೂ ಸರಕಾರದ ಗಮನಕ್ಕೆ ತಂದಿದ್ದರೂ ಕೂಡಾ ಯಾವ ರೀತಿಯ ಕ್ರಮ ಕೈಕೊಂಡಿರುವುದಿಲ್ಲ. ಆದುದರಿಂದ ಈ ಬೇಡಿಕೆಯನ್ನು ಅಂದರೆ ಪುತ್ತೂರಿನಲ್ಲಿ ಅಗ್ನಿಶಾಮಕ ದಳವನ್ನು ತೆರೆಯುವ ಬಗ್ಗೆ ಮುಖ್ಯಮಂತ್ರಿಗಳು ಕ್ರಮ ಕೈಗೊಳ್ಳಬೇಕಾಗಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಖಾತೆ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಹಾಲಿ ಅಗ್ನಿಶಾಮಕ ಠಾಣೆಗಳನ್ನು ತೆರೆಯಲಾಗಿದ್ದು, ಜಿಲ್ಲಾ ಕೇಂದ್ರವಾದ ಉತ್ತರ ಕನ್ನಡ ಜಿಲ್ಲೆಯಲ್ಲಿ ಇನ್ನೂ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಬೇಕಾಗಿದೆ.

ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಸಂಭವಿಸುವ ಅಗ್ನಿ ಅನಾಹುತಗಳನ್ನು ಮಂಗಳೂರು ಅಗ್ನಿಶಾಮಕ ಠಾಣೆಯು ನಂದಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ರಾಜ್ಯದಲ್ಲಿ ಅಗ್ನಿಶಾಮಕ ಸೇವಾ ಚಟುವಟಿಕೆಯನ್ನು ಅಭಿವೃದ್ಧಿ ಪಡಿಸಲು ಭಾರತೀಯ ಸಾಮಾನ್ಯ ವಿಮಾ ನಿಗಮದಿಂದ ಸಾಲವನ್ನು ಪಡೆಯಲಾಗುತ್ತಿದೆ. ಒಂದು ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಬೇಕಾದ ಸಿಬ್ಬಂದಿ ವಾಹನ, ಉಪಕರಣ, ಕಛೇರಿ ಮತ್ತು ಸಿಬ್ಬಂದಿ ವಸತಿ ಗೃಹ ಮುಂತಾದ ಮೆಚ್ಚಿಗೆಗಳನ್ನು ಸೇರಿಸಿದಲ್ಲಿ ಸುಮಾರು ೪೦.೦೦ ಲಕ್ಷ ರೂ.ಗಳು ಬೇಕಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು ಈ ಪ್ರದೇಶವನ್ನು ರಾಜ್ಯದ ಹಿತ್ಕ ಬೆಳೆಯುವ ಹಾಗೂ ಬೆಂಕಿ ಹೆಚ್ಚಾಗಿ ಉದ್ಭವಿಸುವ ಪ್ರದೇಶಗಳಿಗೆ ಹೋಲಿಸಿದರೆ ಬೆಂಕಿ ಅನಾಹುತಗಳ ಸಂಖ್ಯೆ ಬಹು ಕಡಿಮೆ. ಭಾರಿ ಕೈಗಾರಿಕಾ ಕ್ಷೇತ್ರವಾದ ಕ್ಯಾಂಪ್ಕೊ ಹಾಗೂ ಇತರೆ ರಬ್ಬರ್ ಉದ್ಯಮ ಮಂಗಳೂರು ಅಗ್ನಿಶಾಮಕ ಠಾಣೆಯ ಸಹಾಯ ಪಡೆಯುವುದಲ್ಲದೆ, ನಿಯಮಾನುಸಾರ ಸ್ವಂತ ಅಗ್ನಿ ಶಾಮಕ ಉಪಕರಣಗಳನ್ನೂ ಕೂಡ ಹೊಂದಿರಬೇಕಂ.

೭. ಸ್ಟ್ಯಾಂಪ್ ಡ್ಯೂಟಿ ಮನ್ನಾ ಮಾಡುವುದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ನೀಡುವುದನ್ನು ಮುಂದೂವರಿಸುವುದು

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ್ (ಶಹಾಪುರ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆದುಕೊಳ್ಳಲು ಆಸ್ತಿಯನ್ನು ಒತ್ತೆ ಹಾಕುವ ಬಗ್ಗೆ ಸ್ಟ್ಯಾಂಪ್ ಡ್ಯೂಟಿ ಮನ್ನಾ ಮಾಡುವುದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ಕೊಡುತ್ತಿದ್ದುದನ್ನು ೧೯೮೭ರ ಅಕ್ಟೋಬರ್‌ನಿಂದ ನಿಲ್ಲಿಸಿರುವುದಾಗಿ ತಿಳಿದು ಬಂದಿದೆ. ಇದರಿಂದ ಅನೇಕರಿಗೆ ತೊಂದರೆಯಾಗಿದೆ. ಸದರಿ ಸೌಲಭ್ಯವನ್ನು ಮುಂದುವರಿಸಿ ಜನತೆಗೆ ಸಹಾಯ ಮಾಡಬೇಕೆಂದು ಮುಖ್ಯಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.—ಅಧ್ಯಕ್ಷರೇ ಇಲ್ಲಿ ಉತ್ತರ ಬಂದಿದೆ.

ಅಧ್ಯಕ್ಷರು.—ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದಾರೆ ಸ್ವಾಮಿ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.—ನನಗೆ ಉತ್ತರ ಬಂದಿದೆ.

೮) ಕುಂದಾಪುರ ತಾಲ್ಲೂಕಿನ ಹಳ್ಳಿಹೊಳೆ ಆಸ್ಪತ್ರೆಗೆ ವೈದ್ಯರ ನೇಮಕ

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಕಾಲವೊಂದಿತ್ತು, ಜನ ೨೫ ಸಾವಿರ ಸೂಪಾಯಿ ಸಂಗ್ರಹಿಸಿ ದೇಣಿಗೆ ನೀಡಿದರೆ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಘಟಕ ಸ್ಥಾಪನೆಯಾಗುತ್ತಿತ್ತು. ಆ ಯೋಜನೆಯಲ್ಲಿ ಆರೇಳು ವರ್ಷಗಳ ಹಿಂದೆ ದಕ್ಷಿಣ ಕನ್ನಡದ ಕುಂದಾಪುರ ತಾಲ್ಲೂಕಿನ ಪಶ್ಚಿಮ ಘಟ್ಟದ ಬಂಡದ ಗ್ರಾಮ ಹಳ್ಳಿಹೊಳೆಗೂ ಒಂದು ಪ್ರಾಥಮಿಕ ಆರೋಗ್ಯ ಘಟಕ ಮಂಜೂರಾಗಿತ್ತು. ಸಹಸ್ರ ಸಹಸ್ರ ಜನಕ್ಕೆ ಸಂತೋಷವಾಗಿತ್ತು. ಕಾರಣ ಹಳ್ಳಿಹೊಳೆಗೂ ಒಂದು ಆಸ್ಪತ್ರೆ ಬಂದಿತ್ತು. ಮಾನ್ಯ ಮಂತ್ರಿ ಮೊಯಿಲಿಯವರಿಂದ ಉದ್ಘಾಟನೆ ಆಗಿತ್ತು. ಪ್ರಾರಂಭದ ಕೆಲವು ಕಾಲ ಆ ಆಸ್ಪತ್ರೆಗೆ ವೈದ್ಯಾಧಿಕಾರಿಗಳ ಸೇವೆ ಇದ್ದಿತ್ತು. ಕಾಲ ಉರುಳಿತಂ, ಜನತಾ ಸರಕಾರ ಬಂದಿತ್ತು, ಡಾಕ್ಟರಿಗೆ ವರ್ಗವಾಗಿತ್ತು. ವೈದ್ಯರ ನೇಮಕಕ್ಕಾಗಿ ಮತ್ತೆ ಮತ್ತೆ ಸರಕಾರವನ್ನು ಒತ್ತಾಯಿಸಲಾಗಿತ್ತು. ಮನವಿ ನೀಡಲಾಗಿತ್ತು. ಪ್ರಶ್ನೆ ಕೇಳಲಾಗಿತ್ತು, ಆದರೂ ಸ್ಥಾನ ಖಾಲಿಯೇ ಇತ್ತು, ಪ್ರಭಾರ ಯೋಜನೆಯಿಂದ ಯಾವುದೇ ಪ್ರಯೋಜನ ಇಲ್ಲವಾಗಿತ್ತು. ಹಳ್ಳಿಹೊಳೆಯ ಜನಕ್ಕೆಲ್ಲ ಅತ್ಯಂತ ಬೇಸರ ಈವತ್ತ, ಈ ಸರಕಾರದ ಸಾಧನೆಯ ಕುರಿತಾದ ಪ್ರಕಟಣೆಗಳು, ಹೇಳಿಕೆಗಳು, ಜಾಹೀರಾತುಗಳು ಬಹಳಷ್ಟು ಬರುತ್ತಿವೆ ಮತ್ತೂ ಮತ್ತೂ, ಆದರೆ ನಮ್ಮ ಹಳ್ಳಿಯ ಆಸ್ಪತ್ರೆಗೆ ವೈದ್ಯಾಧಿಕಾರಿಗಳನ್ನು ನೇಮಿಸಲು ಇಲ್ಲವೇ ತಾಕತ್ತು. ಅಥವಾ ಎಲ್ಲಾ ಸಾಧನೆಯೂ ಇದೇ ರೀತಿ ಆದರೆ ಜನಕೆಲ್ಲಾ ಬಾರದಿರುವುದೇ ಖಂಡಿತಾ ಆಪತ್ತು. ಕಾಲವೊಂದಿತ್ತು. ಹಳ್ಳಿಹೊಳೆಗೆ ಆಸ್ಪತ್ರೆ ಬಂದಿತ್ತು. ನಾಲ್ಕೈದು ವರ್ಷ ವೈದ್ಯರೇ ಇಲ್ಲವಾಗಿತ್ತು ಎಂದು ಇತಿಹಾಸದ ಪುಟಗಳಲ್ಲಿ ದಾಖಲಾದೀತು. ಆದನ್ನು ತಪ್ಪಿಸಿ, ಜನತೆಗೆ ಸವಲತ್ತು ದೊರಕಿಸಿ ಆಸ್ಪತ್ರೆಗೆ ವೈದ್ಯರನ್ನು ತಕ್ಷಣ ನೇಮಿಸಿ ಎಂದೂ ಒತ್ತಾಯಿಸುತ್ತೇನೆ. ಮಾನ್ಯ ಆರೋಗ್ಯ ಮಂತ್ರಿಗಳ ಬಳಿ ಮತ್ತೆ ಮತ್ತೆ, ಈ ಹೊತ್ತು.